19.12.24

73-0-154

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಮಾನ್ಯ ಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) ಇವರು ಶೂನ್ಯ ವೇಳೆಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

"ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ NCTE ಯು 23 ನೇ August 2010 ರಲ್ಲಿ ಪ್ರಾಥಮಿಕ, ಶಿಕ್ಷಣದಲ್ಲಿ ಶಿಕ್‌ಷಕರ ನೇಮಕಾತಿಗೆ 1 ರಿಂದ 5 ಮತ್ತು 6 ರಿಂದ 8 ಕ್ಕೆ ಪ್ರತ್ಯೇಕ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ. ಇದು ಸ್ವಾಗತಾರ್ಹ, ಆದರೆ ಈ ನಿಯಮವನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಿದ ವರ್ಷ 2017 ಜಾರಿಯಾದ ವರ್ಷವನ್ನು ಅಲ್ಲಗಳೆದು, 2016 ಕ್ಕಿಂತ ಮುಂಚೆ 1-7/8 ಕ್ಕೆ ನೇಮಕಗೊಂಡ ಶಿಕ್ಷಕರನ್ನು 2017ರ ರ ನೂತನ C & R ನಿಯಮವನ್ನು ಪೂರ್ವಾನ್ವಯಗೊಳಿಸಿ, ಶಿಕ್ಷಕರ 25-30 ವರ್ಷದ ಸೇವಾವಧಿಯನ್ನೂ ಗೌರವಿಸದೆ, ಸೇವಾನಿರತರ ಅಧ್ಯಯನ ಶೀಲತೆ ಹಾಗೂ B.A/B.Sc/B.Ed/MA/M.Sc/M.Ed/Ph.D ನಂತಹ ಪದವಿಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ PST ಎಂಬ ಪದನಾಮ ಮಾಡಿ 1-5 ಕ್ಕೆ ಹಿಂಬಡ್ತಿ ನೀಡಲಾಗಿದೆ. ರಾಜ್ಯದ ಯಾವ ಇಲಾಖೆಯಲ್ಲಿಯೂ ಆಗದ ಹಿಂಬಡ್ತಿ ಶಿಕ್ಷಣ ಇಲಾಖೆಯಲ್ಲಿ ಆಗಿರುವುದು ಅತ್ಯಂತ ವಿಷಾದನೀಯ. ಈ ಅನ್ಯಾಯವನ್ನು ಸರಿಪಡಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕ ಸಂಘ(ರಿ) ಬೆಂಗಳೂರು, ಆಗಸ್ಟ್ 12 ರಂದು ರಾಜ್ಯದ 50 ಸಾವಿರಕ್ಕೂ ಅಧಿಕ ಶಿಕ್ಷಕರೊಂದಿಗೆ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಪ್ರತಿಭಟನೆ ಮಾಡಿತ್ತು. ಸೆಪ್ಟೆಂಬರ್ 4 ರಂದು ಮಾನ್ಯ ಮುಖ್ಯಮಂತ್ರಿಗಳು ಈ ಅನ್ಯಾಯವನ್ನು ಸರಿಪಡಿಸಲು ಸುಧೀರ್ಘ ಸಭೆ ನಡೆಸಿ ದಿನಾಂಕ: 23-09-2024 ರಂದು ಮಾನ್ಯ ಶಿಕ್ಷಣ ಇಲಾಖೆಯ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಿ, ಒಂದು ತಿಂಗಳೊಳಗೆ ವರದಿ ನೀಡಲು ಗಡುವು ವಿಧಿಸಿತ್ತು. ಸಮಿತಿ ರಚಿಸಿ 3 ತಿಂಗಳಾದರೂ ಇನ್ನೂ ವರದಿಯನ್ನು ಸರಕಾರಕ್ಕೆ ನೀಡಲಾಗಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ 1-7/8 ಕ್ಕೆ ನೇಮಕಗೊಂಡು 30-35 ವರ್ಷ ಸೇವೆ ಸಲ್ಲಿಸಿ 1-5 ಕ್ಕೆ ಹಿಂಬಡ್ತಿಯಾಗಿ ಸಾವಿರಾರು ಶಿಕ್ಷಕರು ದಿನೇ ದಿನೇ ನಿವೃತ್ತಿ ಹೊಂದುತ್ತಿರುವುದು ಅತ್ಯಂತ ವಿಷಾದನೀಯ. ಸತತ 8 ವರ್ಷಗಳಿಂದ GPT ಭಾಗ್ಯವೂ ಸಿಗದೇ, ಹೈ ಸ್ಕೂಲ್ ಬಡ್ತಿ ಭಾಗ್ಯವೂ ಸಿಗದೇ, HM ಬಡ್ತಿ ಭಾಗ್ಯವೂ ಸಿಗದೇ, ವರ್ಗಾವಣೆಯಲ್ಲಿ ಸ್ಥಳವೂ ಸಿಗದೇ, PST ಎಂದು ಹಣೆಪಟ್ಟಿ ಕಟ್ಟಿಕೊಂಡು ಹಿಂಬಡ್ತಿಗೊಳಗಾಗಿ ಕಣ್ಣೀರು ಹಾಕುತ್ತಿರುವ ಲಕ್ಷಕ್ಕೂ ಅಧಿಕ ಶಿಕ್ಷಕರ ನೋವನ್ನು ಸರಕಾರ ಅರ್ಥಮಾಡಿಕೊಳ್ಳಬೇಕು. ಕೂಡಲೇ ಸರ್ಕಾರ ಆಯುಕ್ತರಿಂದ ವರದಿ ತರಿಸಿಕೊಂಡು 1-7/8 ರ ಶಿಕ್ಷಕರನ್ನು 1-5, ಕ್ಕೆ ಹಿಂಬಡ್ತಿ ನೀಡಿದ್ದನ್ನು ಕೂಡಲೇ ಹಿಂಪಡೆಯಬೇಕು, ಪದವಿ ಹೊಂದಿದ ಎಲ್ಲ 58,783 ಶಿಕ್ಷಕರನ್ನು ಪದವೀಧರ ಶಿಕ್ಷಕ (GPT)ರೆಂದು ಸೇವಾಹಿರಿತನದೊಂದಿಗೆ ಪದನಾಮೀಕರಿಸಬೇಕು. (ಈಗಾಗಲೇ ನೇಮಕಾತಿಗೊಂಡ ಕೇವಲ 27 ಸಾವಿರ GPT ಶಿಕ್ಷಕರ ವೇತನಕ್ಕೆ ಸರ್ಕಾರವು ಪ್ರತಿ ತಿಂಗಳು ಅಂದಾಜು 125 ಕೋಟಿ ಹಣ ಖರ್ಚು ಮಾಡುತ್ತಿದೆ. ಆದರೆ ಪದವಿ ಹೊಂದಿದ ರಾಜ್ಯದ ಒಟ್ಟು 58,783 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು Increment ನೀಡಿ ಪುನರ್ ಪದನಾಮೀಕರಣ ಮಾಡುವುದರಿಂದ ಸರ್ಕಾರಕ್ಕೆ ತಿಂಗಳಿಗೆ ಅಂದಾಜು ಕೇವಲ 10 ಕೋಟಿ 22 ಲಕ್ಷ 82 ಸಾವಿರ ರೂ ಖರ್ಚಾಗುತ್ತದೆ. ಇದರಿಂದ ನಿಯಮಗಳ ಪಾಲನೆಯ ಜೊತೆಗೆ ಸಹಸ್ರಾರು ಶಿಕ್ಷರಿಗೆ ನ್ಯಾಯ ದೊರಕಿಸಿದಂತಾಗುತ್ತದೆ)ಮುಖ್ಯಶಿಕ್ಷಕ ಹುದ್ದೆಗೆ ಹಾಗೂ ಹೈಸ್ಕೂಲ್ ಬಡ್ತಿಗೆ ಈ ಮುಂಚಿನ ನಿಯಮಾವಳಿಯಂತೆ ಅಖಂಡ ಸೇವಾ ಹಿರಿತನವನ್ನು ಪರಿಗಣಿಸುವುದರ ಮೂಲಕ

ಉಲ್ಲಂಘನೆಯಾಗಿರುವ ನಿಯಮಗಳನ್ನು ಸರಿಪಡಿಸಿ ಶಿಕ್ಷಕರಿಗೆ ನ್ಯಾಯ ಒದಗಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ".

**ಉತ್ತರ**

1) ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್ತು (NCTE) ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿ ಮತ್ತು 6 ರಿಂದ 8ನೇ ತರಗತಿಗಳಿಡಗೆ ಬೋಧಿಸುವ ಶಿಕ್ಷಕರಿಗೆ ಪ್ರತ್ಯೇಕ ವಿದ್ಯಾರ್ಹತೆಯನ್ನು ನಿಗದಿಪಡಿಸಿರುತ್ತದೆ. 1 ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪಿಯುಸಿ ಮತ್ತು ಟಿಸಿಹೆಚ್ / ಡಿ.ಇಡಿ ಮತ್ತು 6 ರಿಂದ 8ನೇ ತರಗತಿಗೆ ಬೋಧಿಸುವ ಶಿಕ್ಷಕರಿಗೆ ಪದವಿ ಮತ್ತು ಟಿಸಿಹೆಚ್ / ಡಿ.ಇಡಿ ವಿದ್ಯಾರ್ಹತೆಯನ್ನು ನಿಗದಿಪಡಿಸಿರುತ್ತದೆ.

2) ಆರ್‌ಟಿಇ ಕಾಯ್ದೆ 2009ರ ಕಲಂ 12(1) ರನ್ವಯ ಎನ್‌ಸಿಟಿಇ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿದ ಶಿಕ್ಷಕರನ್ನು ಶಾಲೆಗಳಿಗೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

3) ಆರ್‌ಟಿಇ ಕಾಯ್ದೆ ಮತ್ತು ಎನ್‌ಸಿಟಿಇ ಮಾರ್ಗಸೂಚಿಯಂತೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು 2017ರಲ್ಲಿ ಹೊಸ ನಿಯಮಗಳನ್ನು ರಚಿಸಿ ಈ ಕೆಳಗಿನಂತೆ ವೃಂದಗಳನ್ನು ರಚಿಸಲಾಗಿರುತ್ತದೆ.

| ವೃಂದ | ಬೋಧಿಸುವ ತರಗತಿ | ನಿಗಧಿಪಡಿಸಿದ ವಿದ್ಯಾರ್ಹತೆ |
|---|---|---|
| ಪ್ರಾಥಮಿಕ ಶಾಲಾ ಶಿಕ್ಷಕರು | 1 ರಿಂದ 5 | ಪಿಯುಸಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ |
| ಪದವೀಧರ ಪ್ರಾಥಮಿಕ ಶಿಕ್ಷಕರು | 6 ರಿಂದ 8 | ಪದವಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ |

4) 2016ಕ್ಕಿಂತ ಪೂರ್ವದಲ್ಲಿ ಆ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪಿ.ಯು.ಸಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ ವಿದ್ಯಾರ್ಹತೆ ಆಧರಿಸಿ ನೇಮಕಗೊಂಡಿದ್ದ ಪ್ರಾಥಮಿಕ ಶಾಲಾ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು(ಪಿಎಸ್‌ಟಿ) ವೃಂದದಲ್ಲಿರಿಸಲಾಗಿರುತ್ತದೆ.

5) 2016ರ ಪೂರ್ವದಲ್ಲಿ ಯಾವುದೇ ಶಿಕ್ಷಕರನ್ನು 6 ರಿಂದ 7/8 ತರಗತಿಗಳಿಗೆ ಮಾತ್ರ ಬೋಧಿಸಲು ನೇಮಕ ಮಾಡಿಕೊಂಡಿರುವುದಿಲ್ಲ.

6) 2017ರಲ್ಲಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಭವಿಷ್ಯವರ್ತಿಯಾಗಿ ಜಾರಿಗೆ ಬರುವಂತೆ (With prospective effect) ಜಾರಿಗೊಳಿಸಿದ್ದು, ಪೂರ್ವಾನ್ವಯವಾಗಿ ಜಾರಿಗೊಳಿಸಿರುವುದಿಲ್ಲ.

7) 2016ಕ್ಕಿಂತ ಪೂರ್ವದಲ್ಲಿ ನೇಮಕಗೊಂಡಿರುವ ಶಿಕ್ಷಕರ ವೇತನ, ವಾರ್ಷಿಕ ವೇತನ ಬಡ್ತಿ ಒಳಗೊಂಡಂತೆ ಯಾವುದೇ ಸೇವಾ ಸೌಲಭ್ಯಗಳಲ್ಲಿ ಬದಲಾವಣೆ ಮಾಡಿರುವುದಿಲ್ಲ ಮತ್ತು ಯಾವುದೇ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಹಿಂಬಡ್ತಿಗೊಳಿಸಿರುವುದಿಲ್ಲ.

8) ಪಿಎಸ್‌ಟಿ ವೃಂದದಿಂದ ಜಿಪಿಟಿ ವೃಂದಕ್ಕೆ ಪ್ರಸ್ತುತ 33%ರಷ್ಟು ಹುದ್ದೆಗಳಿಗೆ ಪರೀಕ್ಷೆ ಮೂಲಕ ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಪರೀಕ್ಷೆ ಮೂಲಕ ಮುಂಬಡ್ತಿ ನೀಡುವುದನ್ನು ವಿರೋಧಿಸಿ ಈವರೆಗೂ ಸದರಿ ಮುಂಬಡ್ತಿ ಅವಕಾಶವನ್ನು ಬಳಸಿಕೊಂಡಿರುವುದಿಲ್ಲ.

9) ಪ್ರಸ್ತುತ ಇರುವ ನಿಯಮಗಳಲ್ಲಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯ ಬಡ್ತಿಗೆ ಪಿಎಸ್‌ಟಿ ವೃಂದಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ ಇದನ್ನು ಪ್ರಶ್ನಿಸಿ ಜಿಪಿಟಿ ವೃಂದದ ಶಿಕ್ಷಕರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಕರಣ ದಾಖಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ಮುಖ್ಯ ಶಿಕ್ಷಕರ ಹುದ್ದೆಯ ಬಡ್ತಿಗೆ ಜಿಪಿಟಿ ವೃಂದಕ್ಕೂ ಅವಕಾಶ ಕಲ್ಪಿಸುವಂತೆ ಆದೇಶಿಸಿರುತ್ತದೆ. ಮಾನ್ಯ ನ್ಯಾಯಮಂಡಳಿಯ ಆದೇಶವನ್ನು ಅನುಷ್ಠಾನಗೊಳಿಸುವ ಕುರಿತು ಪರಿಶೀಲಿಸಲಾಗುತ್ತಿದೆ. ಇದರಿಂದ ಪಿಎಸ್‌ಟಿ ವೃಂದದಿಂದ ಮುಖ್ಯ ಶಿಕ್ಷಕರ ವೃಂದಕ್ಕೆ ಮುಂಬಡ್ತಿ ನೀಡಲು ಸಾಧ್ಯವಾಗಿರುವುದಿಲ್ಲ.

10) ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬೇಡಿಕೆಗಳ ಕುರಿತು ಕೂಲಂಕಷವಾಗಿ ಪರಿಶೀಲಿಸಿ ಸಮಗ್ರ ವರದಿ ನೀಡಲು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 23-09-2024ರಂದು ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ಈಗಾಗಲೇ ಎರಡು ಬಾರಿ ಸಭೆ ನಡೆಸಿದ್ದು, ಸಂಘದ ಬೇಡಿಕೆಗಳ ಸಾಧಕ-ಬಾಧಕಗಳ ಕುರಿತು ಮತ್ತು ನಿಯಮಗಳಲ್ಲಿರುವ ಅವಕಾಶಗಳ ಕುರಿತು ಪರಿಶೀಲಿಸುತ್ತಿದೆ. ಸಮಿತಿಯ ವರದಿ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.

**ಸಂಖ್ಯೆ: ಇಪಿ 129 ಪಿಎಂಎ 2024**

**(ಎಸ್. ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಹಾಗೂ
ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಸಚಿವರು